Andolana

Date: Nov 21, 2015 Page No. 5

Edition: Mysore Language: Kannada

ದೇಶದ ಸಂಪತ್ತಿಗೆ ಆರೋಗ್ಯ ಸಂಪತ್ತು ಪೂರಕ

ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಡಾ.ಸ್ಟೀಫನ್

ಮೈಸೂರಿನ ಎಸ್‌ಡಿಎಂಡಿಐಎಂಡಿಯಲ್ಲಿ ಏರ್ಪಡಿಸಿರುವ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ನೈಜೀರಿಯಾದ ಬೇಜ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ಸ್ಟೀಫನ್ ಉದ್ಘಾಟಿಸಿದರು.

ಮೈಸೂರು,ನ.೨೦–ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ವತಿಯಿಂದ ಏರ್ಪಡಿಸಿರುವ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ನೈಜೀರಿಯಾದ ಬೇಜ್ ವಿಶ್ವವಿದ್ಯಾನಿಲಯದ ವಿತ್ತೀಯ ಗಣಿತ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ. ಸ್ಟೀಫನ್ ಶುಕ್ರವಾರ ಚಾಲನೆ ನೀಡಿದರು.

'ಜಾಗತಿಕ ಆರ್ಥಿಕ ಬೆಳವಣಿಗೆ ಹಾಗೂ ಸಂರಕ್ಷಣೆ' ವಿಷಯ ಕುರಿತು ಏರ್ಪಡಿಸಿರುವ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಸ್ಥಿರ ಅಭಿವೃದ್ಧಿಗೆ ಕಿರು ಆರ್ಥಿಕ ಹೂಡಿಕೆಯ ಅವಶ್ಯಕತೆಗಳ ಬಗ್ಗೆ ಮಾತನಾಡಿದ ಅವರು, ಒಂದು ದೇಶದ ಸಂಪತ್ತಿಗೆ ಅಲ್ಲಿನ ಆರೋಗ್ಯ ಸಂಪತ್ತು ಪೂರಕವಾಗಿದ್ದರೆ ಸುಸ್ಥಿರ ಬೆಳವಣಿಗೆ ದೀರ್ಘ ಕಾಲದವರೆಗೆ ಇರುತ್ತದೆ ಎಂದು ಹೇಳಿದರು. ಉದಯೋನ್ಮುಖ ಆರ್ಥಿಕ ವ್ಯವಸ್ಥೆಗಳು ತಮ್ಮ ಮುಂದಿನ ಪೀಳಿಗೆಗಾಗಿ ಶ್ರೀಮಂತ ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸಬೇಕಾದ ಅವಶ್ಯಕತೆ ಬಗ್ಗೆ ತಿಳಿಸಿಕೊಟ್ಟರು.

ಭಾರತ, ಬಾಂಗ್ಲಾದೇಶ, ನೈಜೀರಿಯ, ಫಿಲಿಪ್ಪೀನ್ಸ್, ಬೋಟ್ಸ್ವಾನ ಹಾಗೂ ಇರಾನ್ ದೇಶಗಳಿಂದ ಉದ್ಯಮ ಪ್ರಪಂಚ ಹಾಗೂ ಶಿಕ್ಷಣ ಕ್ಷೇತ್ರಗಳಿಗೆ ಸೇರಿದ ಇನ್ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.

ಚೆನ್ನೈನ ನವಿಯ ಮಾರ್ಕೆಟ್ಸ್ ಲಿಮಿಟೆಡ್ ಸಹಾಯಕ ಉಪಾಧ್ಯಕ್ಷ ಫ್ರಾನ್ಸಿಸ್ ಕುರಿಯನ್, ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್, ಸಮ್ಮೇಳನದ ಮುಖ್ಯಸ್ಥ ಡಾ.ಬಿ.ವೆಂಕಟ್‌ರಾಜ ಉಪಸ್ಥಿತರಿದ್ದರು.